182(128): ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್.

ವಿಷಯ: ಪರಿಶಿಷ್ಟ ಜಾತಿಯವರಿಗೆ ಜಮೀನು ಖರೀದಿಸಿ ವಿತರಣೆ

ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿಯವರಿಗೆ ಜಮೀನು ಖರೀದಿ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಜಮೀನು ಖರೀದಿ ಮಾಡಿಕೊಡಲಾಗಿದೆ?

ಆ) ರಾಜ್ಯಾದ್ಯಂತ ಹಾಗೂ ಕೋಲಾರ ಜಿಲ್ಲೆ ಮತ್ತು ಗೌರಿಬಿದನೂರು ತಾಲ್ಲೂಕಿನ ಅಂಕಿಅಂಶಗಳ ವಿವರಗಳನ್ನು ಒದಗಿಸುವುದು?

ಶ್ರೀ ಬಾಲಚಂದ್ರ ಆರ್ ಜಾರಕಿಹೊಳಿ

ಅ) ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ್ ಭೂ ಖರರೀದಿ ಯೋಜನೆಯಡಿ 1990–91 ನೇ ಸಾಲಿನಿಂದ 1006–07 ನೇ ಸಾಲಿನವರೆಗೆ ರಾಜ್ಯಾದ್ಯಂತ ಪರಿಶಿಷ್ಟ ಜಾತಿಯ 26449 ಫಲಾನುಭವಿಗಳಿಗೆ ಜಮೀನನ್ನು ಖರೀದಿಸಿ ನೀಡಲಾಗಿದೆ.

ಆ) ರಾಜ್ಯಾದ್ಯಂತ ಪರಿಶಿಷ್ಟ ಜಾತಿಯ 26449 ಫಲಾನುಭವಿಗಳಿಗೆ 40347.33 ಎಕರೆ ಖುಷ್ಕಿ ಹಾಗೂ 5983.25 ಎಕರೆ ತರಿ ಜಮೀನು ಖರೀದಿಸಿ ನೀಡಲಾಗಿದ್ದು, ಇದರಲ್ಲಿ ಕೋಲಾರ ಜಿಲ್ಲೆಯಲ್ಲಿ ಇದುವರೆವಿಗೂ 858 ಪರಿಶಿಷ್ಟ ಜಾತಿಯ ಫಲಾನಿಭವಿಗಳಿಗೆ 1311.11 ಎಕರೆ ಖುಷ್ಕಿ ಹಾಗೂ 201.30 ಎಕರೆ ತರಿ ಜಮೀನನ್ನು ಸಹಾಯಧನ ರೂ 194.06 ಲಕ್ಷ ಹಾಗೂ ಸಾಲ ರೂ197.00 ಲಕ್ಷ ವೆಚ್ಚದಲ್ಲಿ ಖರೀದಿಸಿ ನೀಡಲಾಗಿದೆ. ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿಗೆ ಇದುವರೆವಿಗೂ 45 ಪರಿಶಿಷ್ಠ ಜಾತಿಯ ಫಲಾನುಭವಿಗಳಿಗೆ 76.00 ಎಕರೆ ಖುಷ್ಕಿ ಹಾಗೂ 5.00 ಎಕರೆ ತರಿ ಜಮೀನನ್ನು ಸಹಾಯಧನ ರೂ 8.98 ಲಕ್ಷ ಹಾಗೂ ಸಾಲ ರೂ 8.98 ಲಕ್ಷ ವೆಚ್ಚದಲ್ಲಿ ಖರಿದಿಸಿ ನೀಡಲಾಗಿದೆ.